ಓ.ಎಸ್.185/2021 ಡಿ.ಡಬ್ಲು-1
*ಶಂಕ್ರಪ್ಪ ತಂದೆ ನಾಗಪ್ಪ*

ದಿ.19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎ.ಎ.ಜಿ ವಕೀಲರಿಂದ:-**

ಶಿವಶಂಕ್ರಪ್ಪ ನಮ್ಮ ತಾಯಿಯ ತಂದೆ. ಶಿವಶಂಕ್ರಪ್ಪರವರ ಹೆಂಡತಿಯ ಹೆಸರು ಭೀಮವ್ವ. ಶಿವಶಂಕ್ರಪ್ಪ ಮತ್ತು ಭೀಮವ್ವರಿಗೆ ಹನುಮಂತ ಮತ್ತು ಸಿದ್ದಮ್ಮ ಮಕ್ಕಳು. ಹನುಮಂತನಿಗೆ 4 ಜನ ಮಕ್ಕಳು ಅವರೆಂದರೆ ಗಂಗಪ್ಪ, ಶಿವಶಂಕರ, ಹನುಮಂತಿ ಮತ್ತು ಗದ್ದೆಮ್ಮ. ಸದರಿಯವರು ಮಸ್ಕಿಯಲ್ಲಿರುತ್ತಾರೆ. ಭೀಮವ್ವ ಕರಡಕಲ್ಲಿನಲ್ಲಿ ಇರುತ್ತಾಳೆ. ನಮ್ಮ ತಾಯಿಯನ್ನು ಕರಡಕಲ್ಲಿನಲ್ಲಿ ಮದುವೆ ಮಾಡಿ ಕೊಟ್ಟಿರುತ್ತಾರೆ. ನಮ್ಮ ತಂದೆ ಹೆಸರು ನಾಗಪ್ಪ. ಸಿದ್ದಮ್ಮಳಿಗೆ ನಾನು ಒಬ್ಬನೆ ಮಗ. ನಾನು ಕರಡಕಲ್ಲಿನಲ್ಲಿ ವಾಸವಾಗಿರುತ್ತೇನೆ. ನಾನು 10 ನೇ ತರಗತಿ ಓದಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವದಿಲ್ಲ. ಈ ಕೇಸನ್ನು ವೆಂಕಟೆಶ ರವರ ಭೀಮವ್ವರ ವಿರುದ್ದ ಹಾಕಿರುತ್ತಾರೆ. ಅವರು ಭೀಮವ್ವ ಮತ್ತು ನಮ್ಮ ತಾಯಿ ಸಿದ್ದಮ್ಮಳ ಮೇಲೆ ಕೇಸು ಹಾಕಿರುತ್ತಾರೆ. ವಾದಿ ಹೊಲ ನಮ್ಮದು ಎಂದು ಹಾಕಿರುತ್ತಾರೆ. ನಾನು 1981 ರಲ್ಲಿ ಜನಿಸಿರುತ್ತೇನೆ. 1995 ರಲ್ಲಿ ನನ್ನ ವಯಸ್ಸು 15 ವರ್ಷ ಇತ್ತು. ಆಗ ವೆಂಕಟೆಶ ಮತ್ತು ನಮ್ಮ ಮಾವ ಹನುಮಪ್ಪನ ನಡುವೆ ಏನು ವ್ಯವಹಾರ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಚಿಕ್ಕವನಿರುವದರಿಂದ ವಾದಿ ಹೊಲವನ್ನು ಖರೀದಿ ಮಾಡಿದ್ದಾನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಯಾವ ರೀತಿ ಸಾಗುವಳಿ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ನಮ್ಮ ಮಾವ ಹನುಮಪ್ಪ ತೀರಿಕೊಂಡು 6 ವರ್ಷಗಳಾಗಿರುತ್ತವೆ.

2. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಅದರಲ್ಲಿ 7 ಪಟ್ಟಿಗಳು ಇರುತ್ತವೆ. 4 ಪಟ್ಟಿಗಳು 3 ಎಕರೆ ಚಿಲ್ಲರೆ ಇರುತ್ತವೆ. ಭೀಮವ್ವಳಿಗೆ 4 ಎಕರೆ, ಸಿದ್ದಮ್ಮಳಿಗೆ 4 ಎಕರೆ ಮತ್ತು ಹನುಮಂತನಿಗೆ 4 ಎಕರೆ ಬಂದಿರುತ್ತವೆ. 7 ಪಟ್ಟಿಗಳು ಉತ್ತರ-ದಕ್ಷಿಣಗಳಾಗಿರುತ್ತವೆ. ಪೂರ್ವಕ್ಕೆ ಸಿದ್ದಮ್ಮಳ ಪಟ್ಟಿ, ಪಶ್ಚಿಮ ದಿಕ್ಕಿಗೆ 2 ನೇ ಪಟ್ಟಿ ಭೀಮವ್ವ, 3 ನೇ ಪಟ್ಟಿ ಹನುಮಂತ, 4 ನೇ ಪಟ್ಟಿ ಹನುಮಂತಿ, 5 ನೇ ಪಟ್ಟಿ ಶಿವಶಂಕರ, 6 ನೇ ಪಟ್ಟಿ ಗದ್ದೆಮ್ಮ ಮತ್ತು 7 ನೇ ಪಟ್ಟಿ ಗಂಗಪ್ಪನಿಗೆ ಬಂದಿರುತ್ತದೆ. ಸುಮಾರು 2 ವರ್ಷಗಳ ಹಿಂದೆ ಡಿಕ್ರಿ ಪ್ರಕಾರ ಪಟ್ಟಿಗಳಾಗಿರುತ್ತವೆ. 1998 ರಿಂದ ಯಾವ-ಯಾವ ಪ್ರಕರಣ ಹೇಗೆ ನಡೆದಿವೆ ಎಂದು ನನಗೆ ಗೊತ್ತಿಲ್ಲ. ಹಿಂದಿನ ಕೇಸುಗಳಲ್ಲಿ ಯಾರು-ಯಾರು ಪಕ್ಷಕಾರರು ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವೆಂಕಟೆಶ ಭೀಮವ್ವರ ವಿರುದ್ದ ಕೇಸು ಹಾಕಿದ ಬಗ್ಗೆ ಬರೆದಿರುತ್ತಾರೆ. ಮತ್ತೇನು ಬರೆದಿರುತ್ತಾರೆ ಎಂದು ನನಗೆ ಹೇಳಲಾಗುವದಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವೆಂಕಟೇಶ ಈತನು ದಾವೆ ಚಾಲ್ತಿಯಲ್ಲಿದ್ದಾಗ ದಾವಾ ಆಸ್ತಿ ಖರೀದಿ ಮಾಡಿದ್ದ ಎಂದು ಹೇಳಿ ಬರೆಸಿಲ್ಲ. ವೆಂಕಟೇಶ ಹನುಮಪ್ಪನ ಕಡೆಯಿಂದ ಜಮೀನು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ನಿಖರವಾಗಿ ಹೇಳಲು ಬರುವದಿಲ್ಲ. ಓ.ಎಸ್.ನಂ.40/1998 ದಾವೆಯನ್ನು ಮಲ್ಲಮ್ಮ ಮತ್ತು ಅವರ ಮಕ್ಕಳು ಭೀಮವ್ವ ರವರ ವಿರುದ್ದ ಹಾಕಿದ್ದರು. ಅವರು ಯಾವ ಕಾರಣಕ್ಕೆ ದಾವೆ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಎಫ್.ಡಿ.ಪಿ.ನಂ.13/2015 ನ್ನು ಯಾವ ಕಾರಣಕ್ಕಾಗಿ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಆ ಕೇಸುಗಳು ಯಾವಾಗ ಮುಗಿದಿರುತ್ತವೆ ಎಂದು ನನಗೆ ಗೊತ್ತಿಲ್ಲ.

3. ದಸ್ತಾವೇಜು ನಂ.427/1995-1996 ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಈಗ ಜೀವಂತ ಇರುತ್ತಾರೆ. ಭೀಮವ್ವ ಜೀವಂತ ಇರುತ್ತಾರೆ. ಸಿದ್ದಮ್ಮ ಮತ್ತು ಭೀಮವ್ವ ರವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಆಗುವದಿಲ್ಲ ಎಂದರೆ ಭೀಮವ್ವಳಿಗೆ ಆಗುವದಿಲ್ಲ ಸಿದ್ದಮ್ಮಳಿಗೆ ಆಗುತ್ತದೆ ಎನ್ನುತ್ತಾರೆ. ಈ ಕೇಸಿನಲ್ಲಿ ನನಗೆ ಎಲ್ಲಾ ಗೊತ್ತಿದೆ ಎಂದು ಬರೆದು ಹಾಕಿರುತ್ತದೆ. ಈ ಕೇಸಿನಲ್ಲಿ ಭೀಮವ್ವ ಮತ್ತು ಸಿದ್ದಮ್ಮ ರವರ ಲಿಖಿತ ಹೇಳಿಕೆ ಬಿಟ್ಟು 3 ರಿಂದ 7 ನೇ ಪ್ರತಿವಾದಿಯರು ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ನನಗೆ ಹೇಳಲಾಗವದಿಲ್ಲ. ನಾನು ನಮ್ಮ ಅಜ್ಜಿಯ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ. ನಮ್ಮ ಮಾವ ಜೀವಂತ ಇದ್ದಾಗ ಯಾವ-ಯಾವ ಆಸ್ತಿಯನ್ನು ಮಾರಾಟ ಮಾಡಿರುತ್ತಾನೆ ಎಂದು ನಮ್ಮ ಅಜ್ಜಿಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಮಾರಾಟ ಮಾಡಿದ ಆಸ್ತಿಗೆ ಭೀಮವ್ವ, ಸಿದ್ದವ್ವ, ಹನುಮಂತ ಮತ್ತು ಅವರ ಮಕ್ಕಳು ತಕರಾರು ಮಾಡಿದ ಬಗ್ಗೆ ಗೊತ್ತು. ಹನುಮಂತನ ಹೆಂಡತಿ ಮತ್ತು ಮಕ್ಕಳು ತಕರಾರು ಮಾಡಿರುತ್ತಾರೆ ಎನ್ನುತ್ತಾರೆ. ಅವರು ತಕರಾರು ಮಾಡಿದ ಬಗ್ಗೆ ನಾನು ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಮ್ಮ ಅಜ್ಜಿ ನನಗೆ ಹೇಳಿದ ವಿಷಯ ಬಿಟ್ಟು ಈ ಕೇಸಿನ ಬಗ್ಗೆ ಬೇರೆ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಾರಿದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ನಮ್ಮ ಅಜ್ಜಿ ಮತ್ತು ತಾಯಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.